# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1372 |
| ಮಾನ್ಯ ಸದಸ್ಯರ ಹೆಸರು | ಡಾ. ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 22-08-2025 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಇಲಾಖೆಯ ಉತ್ತರ |
|---|---|---|
| ಅ) | ಸಾಮಾಜಿಕ ಹರಿಕಾರ ಮಾಜಿ ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಸಂಶೋಧನಾ ಸಂಸ್ಥೆ ಯಾವಾಗ ಪ್ರಾರಂಭಗೊಂಡಿತು; ಈ ಸಂಸ್ಥೆ ಸ್ಥಾಪನೆ ಮಾಡಲು ಉದ್ದೇಶವೇನು; ಈ ಸಂಸ್ಥೆಯ ಮೂಲಕ ಕೈಗೊಳ್ಳುತ್ತಿರುವ ಕಾರ್ಯಗಳೇನು : | ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆಯನ್ನು 1993 ರಲ್ಲಿ ಸ್ಥಾಪಿಸಲಾಯಿತು ಹಾಗೂ ಈ ಸಂಸ್ಥೆಯು ದಿನಾಂಕ:20-08-1993 ರಿಂದ ಕಾರ್ಯಾರಂಭ ಮಾಡಿರುತ್ತದೆ.<br><br>ಹಿಂದುಳಿದ ವರ್ಗಗಳ ಬಗ್ಗೆ ಅಧ್ಯಯನ / ಸಂಶೋಧನೆ ಮಾಡಿ, ಸರ್ಕಾರ ಈ ವರ್ಗಗಳಿಗಾಗಿ ಕೈಗೊಳ್ಳುವ ಯೋಜನೆಗಳಿಗೆ ಒಂದು ನೀತಿ ರೂಪಿಸಲು ಅನುವಾಗುವಂತೆ ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಲಾಗಿದೆ.<br><br>ಈ ಸಂಸ್ಥೆಯ ಮೂಲಕ ಕೈಗೊಳ್ಳುತ್ತಿರುವ ಕಾರ್ಯಗಳು ಈ ಕೆಳಕಂಡಂತಿವೆ<br>• ಹಿಂದುಳಿದ ವರ್ಗಗಳ / ಅಲೆಮಾರಿ / ಅರೆ-ಅಲೆಮಾರಿಗಳ ಬಗ್ಗೆ ಅಧ್ಯಯನ/ಕುಲಶಾಸ್ತ್ರೀಯ ಅಧ್ಯಯನ.<br>• ವಿಚಾರ ಸಂಕಿರಣ/ವಿಚಾರ ಗೋಷ್ಠಿ.<br>• ಹಿಂದುಳಿದ ವರ್ಗಗಳಿಗಾಗಿ ಇರುವ ಯೋಜನೆಗಳ ಬಗ್ಗೆ ಪ್ಲಾನ್ ಮಾನಿಟರಿಂಗ್.<br>• ಸಮೀಕ್ಷೆ/ಮೌಲ್ಯಮಾಪನ.<br>• ತರಬೇತಿ ಕಾರ್ಯಾಗಾರ.<br>• ಸಾಕ್ಷ್ಯಚಿತ್ರ ನಿರ್ಮಾಣ ಹಾಗೂ ಪುಸ್ತಕ ಪ್ರಕಟಣೆ. |
| ಆ) | ಪ್ರತಿ ಜಿಲ್ಲೆಯಲ್ಲಿ ಈ ಸಂಸ್ಥೆಗೆ ಸಂಬಂಧಪಟ್ಟ ತಾಲ್ಲೂಕು ಕಛೇರಿಗಳಿವೆಯೇ; ಇಲ್ಲದಿದ್ದಲ್ಲಿ, ಇದು ಹೇಗೆ ಕಾರ್ಯಗಳನ್ನು ಅನುಷ್ಠಾನಗೊಳಿಸುತ್ತಿದೆ : | ಈ ಸಂಸ್ಥೆಯು ರಾಜ್ಯಮಟ್ಟದ ಏಕಮೇವ ಸಂಸ್ಥೆಯಾಗಿದ್ದು, ಜಿಲ್ಲಾ/ತಾಲ್ಲೂಕು ಮಟ್ಟದಲ್ಲಿ ಈ ಸಂಸ್ಥೆಯ ಯಾವುದೇ ಕಛೇರಿಗಳು ಇರುವುದಿಲ್ಲ.<br><br>ಈ ಸಂಸ್ಥೆಯ ಕಾರ್ಯಗಳನ್ನು ಜಿಲ್ಲಾ ಮಟ್ಟದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕಛೇರಿಗಳ ಹಾಗೂ ವಿವಿಧ ವಿಶ್ವವಿದ್ಯಾಲಯಗಳ ಸಮಾಜಶಾಸ್ತ್ರ / ಮಾನವಶಾಸ್ತ್ರ ವಿಭಾಗದ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ. |

<table>
<tr>
<td>ಇ)</td>
<td>ಪ್ರತಿ ವರ್ಷ ಈ ಸಂಸ್ಥೆಗೆ ನೀಡುವ ಅನುದಾನವೆಷ್ಟು: ಅನುದಾನ ಕೊರತೆಯಿಂದ ಸಂಸ್ಥೆಯು ನಿಷ್ಕ್ರಿಯ ಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕಿದೆಯೇ:</td>
<td>ಈ ಸಂಸ್ಥೆಗೆ 2021-22 ರಿಂದ ಯೋಜನಾ ಕಾರ್ಯಕ್ರಮಗಳಿಗಾಗಿ ಬಿಡುಗಡೆಯಾಗುತ್ತಿರುವ ಅನುದಾನದ ವಿವರ ಈ ಕೆಳಕಂಡಂತಿದೆ :
<table>
<tr><th>ವರ್ಷ</th><th>ನೀಡಲಾದ ಅನುದಾನ (ರೂ. ಲಕ್ಷಗಳಲ್ಲಿ)</th></tr>
<tr><td>2021-22</td><td>18.75</td></tr>
<tr><td>2022-23</td><td>18.75</td></tr>
<tr><td>2023-24</td><td>18.75</td></tr>
<tr><td>2024-25</td><td>146.186</td></tr>
<tr><td>2025-26</td><td>140.00</td></tr>
</table>
ಈ ಸಂಸ್ಥೆಗೆ ಅನುದಾನದ ಕೊರತೆ ಇರುವುದಿಲ್ಲ.</td>
</tr>
<tr>
<td>ಈ)</td>
<td>ಈ ಸಂಸ್ಥೆಯನ್ನು ಸ್ವಾಯತ್ತತಾ ಸಂಸ್ಥೆಯನ್ನಾಗಿ ಪರಿವರ್ತಿಸಲಾಗಿದೆಯೇ : ಈ ಸ್ವಾಯತ್ತ ಸಂಸ್ಥೆಗೆ ಕಾರ್ಯನಿರ್ವಹಣೆಗೆ ಪ್ರತಿ ವರ್ಷ ಅಗತ್ಯತೆ ಇರುವ ಅನುದಾನವೆಷ್ಟು?</td>
<td>ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆಯನ್ನು ಸ್ವಾಯತ್ತತಾ ಸಂಸ್ಥೆಯನ್ನಾಗಿ ಪರಿವರ್ತಿಸಲಾಗಿರುವುದಿಲ್ಲ.<br><br>2025-26ನೇ ಸಾಲಿಗೆ ಸಂಸ್ಥೆಯ ಕಾರ್ಯಚಟುವಟಿಕೆಗಳ ನಿರ್ವಹಣೆಗೆ ರೂ.140.00 ಲಕ್ಷಗಳನ್ನು ನಿಗಧಿಪಡಿಸಲಾಗಿದೆ.</td>
</tr>
</table>

**ಸಂಖ್ಯೆ:ಹಿಂವಕ 298 ಬಿಸಿಎ 2025**

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು